ಶ್ರೀ ರಾಮಕೃಷ್ಣ ಹೆಗ್ಗಡೆ.—ಈಗಿನ ತಾಲೂಕು ಬೋರ್ಡ್‌ಗಳು ಸರಿಯಾಗಿ ಕೆಲಸ ಮಾಡಲಿಲ್ಲ ವೆಂದು ಹೇಳುವುದಕ್ಕಾಗುವುದಿಲ್ಲ. ಅವುಗಳಲ್ಲಿ ಕೆಲವು ತೊಂದರೆಗಳಿವೆ. ಅವರು ತಮಗೆ ಅಧಿಕಾರ ಹೆಚ್ಚಾಗಿಬೇಕು, ದುಡ್ಡು ಹೆಚ್ಚಾಗಬೇಕು ಎಂಬುದಾಗಿ ಕೇಳುತ್ತಿದ್ದಾರೆ. ಆದ್ದರಿಂದ ಅವುಗಳಲ್ಲಿ ಏನೇನು ದೋಷದೋಷಗಳಿವೆಯೋ ಅವನ್ನು ನಿವಾರಿಸಬೇಕೆಂದಿದ್ದೇವೆ. ಅವು ಹೆಚ್ಚಿಗೆ ಪವರ್‌ಫುಲ್ ಆಗಿರಬೇಕೆಂಬ ಉದ್ದೇಶದಿಂದ ಈಗಿರತಕ್ಕ ಪದ್ಧತಿಯನ್ನು ತೆಗೆದು ಒಟ್ಟು ಬಿ.ಡಿ.ಓ. ಆಫೀಸರಿಗೆ. ಈ ಅಧಿಕಾರವನ್ನು ಕೊಡುವುದಕ್ಕೆ ನಾವು ಸಿದ್ಧರಿಲ್ಲ.

ಶ್ರೀ ಬಿ. ಚನ್ನಬ್ಯೈರೇ ಗೌಡ.—ಆ ತಿದ್ದುಪಡಿಯನ್ನು ಮಾಡುವುದರಿಂದ ಸ್ವಲ್ಪ ನಿಧಾನವಾಗು ತ್ತದೆ ಎಂದು ಊಹೆ ಮಾಡಿ ಹೇಳುತ್ತೀರಿ, ಇದೇ ತಿದ್ದುಪಡಿಯನ್ನು ಆರು ತಿಂಗಳ ಹಿಂದೆಯೇ ಮಾಡಿ ಕಾಲಕ್ಕೆ ಸರಿಯಾಗಿ ಎಲೆಕ್ಷನ್ ಮಾಡದೆ ಇರುವುದು ಸರ್ಕಾರದ ಕರ್ತವ್ಯ ಲೋಪ ಅಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಕರ್ತವ್ಯಲೋಪ ಆಗಿಲ್ಲ. ಆ ವಿಷಯವನ್ನು ಈಗ ಒಂದು ವರ್ಷ ದಿಂದ ವಿಚಾರಮಾಡುತ್ತಿದ್ದೇವೆ. ಮೊದಲು ಸ್ಟಡೀ ಟೀಮನ್ನು ಸರ್ಕಾರದವರು ನೇಮಕ ಮಾಡಿದರು ಅವರು ಬೇರೆ ಬೇರೆ ರಾಜ್ಯಗಳಿಗೆಲ್ಲಾ ಹೋಗಿ ತಿರುಗಾಡಿ ನೋಡಿಕೊಂಡು ಬಂದು ಆ ಬಗ್ಗೆ ಒಂದು ರಿಪೋರ್ಟನ್ನು ಕೊಟ್ಟರು. ಆ ರಿಪೋರ್ಟನ್ನು ಸರ್ಕಾರದವರು ಪರಿಶೀಲನೆಮಾಡಿ ಅದರ ಮೇರೆ ಬಿಲ್ಲು ಸಿದ್ಧವಾಗುತ್ತಿದೆ. ಅದು ಎರಡು ತಿಂಗಳು ನಾಲ್ಕುತಿಂಗಳುಗಳಲ್ಲಿ ಆಗುವ ಕೆಲಸವಲ್ಲ.

Sri G. V. GOWDA.—It is stated that the term of Taluk Boards of Sira, Pavagada and Turuvekere will expire on 14th July 1964. In the normal course steps should have been taken by now. I want to know whether they have taken steps to extend the period ?

Sri RAMAKRISHNA HEGDE.—I have already stated that whenever the term of any Taluk Board expires, action will be taken to extend the period upto a point where general elections would be held.

Sri S. M. KRISHNA.—Does the Hon'ble Minister recall the assurance held out to us, that an opportunity would be given to this House to have its say about the Report of the Study team submited by Sri Kondajji Basappa ?

Sri RAMAKRISHNA HEGDE.—I do not remember to have given any assurance like that. I have assured the House that the Bill will be placed before the House for consideration as early as possible and the Bill is based on the recommendation of the Study Team.

Sri G. V. GOWDA.—Is it not desirable to allow the House to discuss that particular Report before the amending Bill is passed ?

Sri RAMAKRISHNA HEGDE.—It is a matter of opinion.

Percentage of Loss in the Transmission of the Electricity in the State Distribution System.

*Q.—257. Sri GANGADHARA NAMOSHI (Gulbarga).—

Will the Government be pleased to state :—

(*a*) the percentage of loss in the transmission of electricity in the State Distribution System since the Mysore State Electricity Board (M.S.E.B.) was set up (figures for each one of the years may be furnished) ;

(*b*) the monetary loss involved in transmission ;

(*c*) the steps taken to reduce the losses in transmission ?

A.—Sri S. NIJALINGAPPA (Chief Minister).—

(*a*)	1957-58	...	16.2%
	1958-59	...	16.4%
	1959-60	...	13.4%
	1960-61	...	13.6%
	1961-62	...	13.2%
	1962-63	...	13.3%

(*b*) About Rs. 60.00 lakhs per annum.

(*c*) (1) Improving the distribution system by increasing the size of conductors;

(2) Running duplicate Lines;

(3) Increasing the voltage of distribution;

(4) Running new transmission lines to various load centres;

(5) Installing new high tension sub-stations in the various load centres of the State.

ಶ್ರೀ ಗಂಗಾಧರ ನಾಮೋಷಿ.—ರಾಜ್ಯದಲ್ಲಿ ವಿದ್ಯುಚ್ಛಕ್ತಿಯನ್ನು ರವಾನಿಸಿ ಒದಗಿಸುವ ಪದ್ಧತಿಯಿಂದ ಆಗಿರತಕ್ಕ ಆರ್ ಇಂಡಿಯಾ ಅವರೇಜ್ ನಷ್ಟ ಎಷ್ಟು ಇದೆ ಎಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಸರ್ಕಾರಕ್ಕೆ ಗೊತ್ತಿಲ್ಲ.

ಶ್ರೀ ಗಂಗಾಧರ ನಾಮೋಷಿ.—ಪಕ್ಕದ ರಾಜ್ಯದಲ್ಲಿ ಎರಡು ಮೂರು ಪರ್ಸೆಂಟ್ ಲಾಸ್ ಆಗುತ್ತಿದ್ದರೆ ಇಲ್ಲ 13 ಪರ್ಸೆಂಟ್ ಲಾಸ್ ಆಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಪ್ರಪಂಚದಲ್ಲಿ ಎರಡು-ಮೂರು ಪರ್ಸೆಂಟ್ ಎಲ್ಲೂ ಮಾಡುವುದ ಕ್ಕಾಗುವುದಿಲ್ಲ. ಹತ್ತು ಪರ್ಸೆಂಟಿಗಿಂತ ಕಡಮೆ ಮಾಡುವುದಕ್ಕಾಗುವುದಿಲ್ಲ. ಹತ್ತು ಪರ್ಸೆಂಟಿಗಿಂತ ಕಡಮೆ ಮಾಡಬೇಕಾದರೆ ವೈರು ದಪ್ಪ ಆಗುತ್ತದೆ. ಒಂದಕ್ಕೆ ಮೂರರಷ್ಟಾಗುತ್ತದೆ. ಖರ್ಚು ಜಾಸ್ತಿ ಆಗುತ್ತದೆ. ಎರಡು ಮೂರು ಪರ್ಸೆಂಟ್ ಆಗುತ್ತದೆ ಎನ್ನುವುದು ಕನಸು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾಲ್ಕು ಪರ್ಸೆಂಟ್ ಮಿನಿಮೈಜ್ ಮಾಡುವುದಕ್ಕೆ ಸಾಧ್ಯವಿದೆ ಎಂಬುದನ್ನು ಕಂಡುಕೊಂಡಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಇದಕ್ಕೆ ನಾನು ಈಗಾಲೇ ಉತ್ತರ ಹೇಳಿದೆ. ಅದಕ್ಕೆ ಏನೇನು ಕೆಲಸ ಮಾಡಬೇಕೆಂದು ಹೇಳಿದೆ, ಅದನ್ನು ಮಾಡುತ್ತಿದ್ದೇವೆ.

Sri G. V. GOWDA.—May I know the steps taken to see that this loss is reduced to the minimum possible extent?

Sri S. NIJALINGAPPA.—It is a method of calculation. That is all. This loss can never be avoided. The loss is notional. At the most we could bring it down to 10 per cent. We cannot lower it less than 10 per cent, because the resistance of the wire is there. We are trying to reduce the loss.